ಮಹಿಳೆ ಸತ್ಯಾಗ್ರಹವನ್ನು ಮಾಡುತ್ತಿದ್ದಾಳೆ. ಇವೊತ್ತು ನಾನು ಎಸ್.ಪಿ. ಯವರಿಗೂ ಕೂಡ ಮಾತನಾಡಿದ್ದೇನೆ. ಇವೊತ್ತು ಅಥವಾ ನಾಳೆಯೊಳಗೆ ಆ ಹುಡುಗನನ್ನು ಪೋಲೀಸ್ ಕಸ್ಟಡಿಗೆ ಕೊಡಬೇಕೆಂದು ಆದೇಶ ಕೊಟ್ಟಿದ್ದೇವೆ. ಅವರು ಒಪ್ಪಿಕೊಂಡಿದ್ದಾರೆ. ನಮ್ಮ ಗೃಹಮಂತ್ರಿಗಳು ಕೂಡ ಹೇಳಿದ್ದಾರೆ. ಡಿಜಿ ಹಾಗೂ ಎಸ್‌ಪಿಯವರಿಗೆ ಮಾತನಾಡಿ ಆ ಹುಡುಗ ಎಲ್ಲಿದ್ದರೂ ಹುಡುಕಿ ಆತನನ್ನು ತಂದು ಪೋಲೀಸ್ ಕಸ್ಟಡಿಯೊಳಗೆ ಕೊಡುವಂಥದ್ದು ಇವೊತ್ತು ಅಥವಾ ನಾಳೆ ಮಾಡುವಂಥ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅವರ ಮನೆಯವರು ಸಿಗದಿದ್ದರೆ ಆ ಹುಡುಗನ ಹಿಂದೆ ಯಾರಿದ್ದಾರೆ, ಯಾರು ಅವನ ಪೋಷಣೆ ಮಾಡುತ್ತಿದ್ದಾರೆ. ಆ ವರ್ಗದ ಹೆಸರನ್ನು ಕೂಡ ನಾವು ಎಸ್‌ಪಿಯವರಿಗೆ ಕೊಟ್ಟಿದ್ದೇವೆ. ನಾವು ಕೂಡ ಬಹಳ ಸೀರಿಯಸ್ಸಾಗಿದ್ದೇವೆ. ಇವೊತ್ತು ಸಂಜೆ ಅಥವಾ ನಾಳೆ ಸಂಜೆಯೊಳಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ : ಎಷ್ಟೋ ಮದುವೆಗಳನ್ನು ಮಾಡಿಸುತ್ತೀರಿ. ಹಾಗೆಯೇ ಈ ಮದುವೆಯನ್ನು ಕೂಡ ಪೋಲೀಸ್ ಸ್ಟೇಶನ್‌ನಲ್ಲೇ ಮಾಡಿಸಿ.

ಶ್ರೀ ವಾಟಾಳ್ ನಾಗರಾಜ್ : ಪೋಲೀಸ್ ಸ್ಟೇಶನ್‌ನಲ್ಲಿ ಮದುವೆ ಮಾಡುತ್ತೇವೆಂದು ಹೇಳಿ.

ಶ್ರೀ ಆರ್. ರೋಷನ್ ಬೇಗ್ : ಅವರು ಪೋಲೀಸ್ ಸ್ಟೇಶನ್‌ನಲ್ಲಿ ಮದುವೆ ಮಾಡಿಸಬೇಕು ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ಕೂಡ ಒಪ್ಪುತ್ತೇನೆ. ಅದು ಕೂಡ ಬಹಳ ಒಳ್ಳೆಯ ಕೆಲಸ.

ಶ್ರೀ ಚಂದ್ರಶೇಖರ್ ನಾಯಕ್ : ನಮಗೆ ಅವಕಾಶ ಸಿಗುವುದು ಕಡಿಮೆ ಆದರೂ ಸಿಕ್ಕಿದೆ. ನನ್ನ ವಿಷಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಂದಿದೆ. ನನಗೆ ಅರ್ಧ ಗಂಟೆ ಕಾಲಾವಕಾಶ ಚರ್ಚೆಗೆ ಅವಕಾಶ ಸಿಕ್ಕಿದೆ. ಆದರೆ ನಮ್ಮ ವಿಷಯ ಬರಲೇ ಇಲ್ಲ.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ಇದಾದಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಚಂದ್ರಶೇಖರ್ ನಾಯಕ್ : ಇದು ಆದಮೇಲೆ ಎಂದರೆ ಏಳೂವರೆ ಗಂಟೆಯಾಗುತ್ತದೆ.

ಉಪಾಧ್ಯಕ್ಷರು : ಆಗುತ್ತದೆ. ಮತ್ತೆ ಇನ್ನೇನು ಮಾಡುವುದು.

ವಿತ್ತೀಯ ಕಾರ್ಯಕಲಾಪಗಳು :

1997-98ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಬೇಡಿಕೆ ಸಂಖ್ಯೆ 11 ಮತ್ತು 14) ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಹಾಗೂ ಸೆಕೆಂಡರಿ ಶಿಕ್ಷಣ.

+ ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಉಪಾಧ್ಯಕ್ಷರೆ, ನಾನು ಶಿಕ್ಷಣದ ಮೇಲೆ ಮಾತನಾಡುವುದಕ್ಕೆ ಹೋದಾಗ ಹೆಚ್ಚು ಅಡ್ಡಿ ಆತಂಕಗಳು ಬರುತ್ತವೆ. ಆದಕಾರಣ ತಾವು ನನಗೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡಿ. 1997-98ನೇ ಸಾಲಿನ ಶಿಕ್ಷಣ ಇಲಾಖೆಯ ಇನ್ನತ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಪ್ರೌಢಶಿಕ್ಷಣ ಹಾಗೂ ಅನೇಕ ಇಲಾಖೆಗಳ ಬೇಡಿಕೆಗಳ ಬಗ್ಗೆ ಮಾತನಾಡುವಂತಹ

ಸಂದರ್ಭದಲ್ಲಿ ನನಗೆ ಚರ್ಚೆಯನ್ನು ಪ್ರಾರಂಭ ಮಾಡುವ ಸದವಕಾಶವನ್ನು ಕಲ್ಪಿಸಿದ್ದಕ್ಕಾಗಿ ವಂದನೆಯನ್ನು ಹೇಳುತ್ತೇನೆ. ಇವೆಲ್ಲಾ ಬೇಡಿಕೆಗಳನ್ನು ವಿರೋಧಿಸುವುದಾದರೆ ಯಾವ ಕಾರಣಕ್ಕೆ ವಿರೋಧಿಸಬೇಕು ಎನ್ನತಕ್ಕಂಥ ವಿಚಾರವನ್ನು ಕೊನೆಯಲ್ಲಿ ಹೇಳುವಂಥ ಅಭಿಲಾಷೆಯನ್ನು ತಮ್ಮಲ್ಲಿ ವ್ಯಕ್ತಮಾಡುತ್ತೇನೆ. ತಮಗೆ ಗೊತ್ತಿದೆ ನಮಗೆ ಈಗ ಸ್ವತಂತ್ರ ಬಂದು 50 ವರ್ಷಗಳಿಗೆ ಮುಟ್ಟುತ್ತಿದ್ದೇವೆ. ಆದರೂ ಕೂಡ ಶಿಕ್ಷಣವನ್ನು ಪೂರ್ಣಗೊಳಿಸಿ ಹೊರಬರತಕ್ಕಂಥ ಲಕ್ಷಾಂತರ ವಿದ್ಯಾವಂತರಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಿ ಕೊಡದೇ ಇರತಕ್ಕಂಥ ಸಂದಿಗ್ಧತೆ ಬರುತ್ತಿದೆ. ವರ್ಷೇವರ್ಷೇ ಈ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಈ ನಮ್ಮ ಉನ್ನತ ಶಿಕ್ಷಣ ಸಚಿವರು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ತಮ್ಮತಮ್ಮ ಇಲಾಖೆಗಳ ಮೇಲೆ ಅನುದಾನದ ಬೇಡಿಕೆಗಳ ಅನುಮತಿಗಾಗಿ ಈ ಸಭೆಯ ಮುಂದಿಟ್ಟಿದ್ದಾರೆ. ಈ ಶಿಕ್ಷಣದ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಸದನದ ವಿಷಯ ಸಮಿತಿ ಈ ರಾಜ್ಯದ ಹೆಸರಾಂತ ಶಿಕ್ಷಣ ತಜ್ಞರನ್ನು ಕರೆಸಿ ಅನೇಕ ವಿಚಾರಗಳನ್ನು ವಿಚಾರ ವಿನಿಮಯ ಮಾಡಿ, ಕಾಲೇಜು ಶಿಕ್ಷಣ ಇಲಾಖೆ, ಉನ್ನತ ಶಿಕ್ಷಣವನ್ನು ನಿಡಸತಕ್ಕಂಥ ಇಲಾಖೆಗಳು ಯಾವ ಯಾವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಕೆಲವು ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆಯ ಮುಖ್ಯ ಉದ್ದೇಶ ಕಾಲೇಜುಗಳಿಗೆ ಶಿಕ್ಷಣ ನೀಡತಕ್ಕಂಥದ್ದು. ಅವರಿಗೆ ಈ ಹಾಸ್ಟೆಲ್ ನಡೆಸತಕ್ಕಂಥ ಉಸಾಬರಿ ಏತಕ್ಕೆ ಎಂದು ಅವರು ಪ್ರಸ್ತಾಪ ಮಾಡಿದ್ದಾರೆ. ತಮಗೆ ಗೊತ್ತಿರುವ ಹಾಗೆ ಈಗಾಗಲೇ ಸಮಾಜ ಕಲ್ಯಾಣ ಇಲಾಖೆ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಇಲಾಖೆಗಳು ಹಲವಾರು ಹಾಸ್ಟೆಲ್‌ಗಳನ್ನು ಸ್ಥಾಪನೆ ಮಾಡಿ ಹಾಸ್ಟೆಲ್‌ಗಳನ್ನು ನಿರ್ವಹಿಸುತ್ತಿರುವಾಗ ಕಾಲೇಜು ಶಿಕ್ಷಣ ಇಲಾಖೆಗೆ ಈ ಕೆಲಸ ಏಕೆ ಬೇಕು? ಎಂದು ನಾವು ಯೋಜನೆ ಮಾಡಬೇಕಾಗುತ್ತದೆ. ಇದರ ಜೊತೆಗೆ ಕೋಲಾರದಲ್ಲಿರತಕ್ಕಂಥ ಹೋದ ವರ್ಷ ಪ್ರಾರಂಭವಾಗಿರತಕ್ಕಂಥ ಸ್ಕೂಲ್ ಆಫ್ ಲಾ ಇದನ್ನು ಕೇಂದ್ರ ಸರ್ಕಾರದು ನ್ಯಾಶನಲ್ ಸ್ಕೂಲ್ ಆಫ್ ಲಾ ಮಟ್ಟದಲ್ಲಿ ಉನ್ನತ ದರ್ಜೆಗೆ ಏರಿಸಿ ಅದನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಬಬೇಕು ಎಂದು ಉಪಯುಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ. ಇವೊತ್ತು ನಾವು ಪ್ರಾಥಮಿಕ ಶಿಕ್ಷಣವನ್ನು ಬೋಧನೆ ಮಾಡಬೇಕಾದರೆ ಒಂದು ಶಿಕ್ಷಣ ತರಬೇತಿಯ ವ್ಯವಸ್ಥೆಯನ್ನು ಮಾಡಿದ್ದೇವೆ. ಹಾಗೆ ಪದವಿಪೂರ್ವ ಕಾಲೇಜುಗಳಿಗೆ ಬೋಧನೆ ಮಾಡಲು ಆಯ್ಕೆ ಆಗತಕ್ಕಂಥ ಉಪನ್ಯಾಸಕರಿಗೆ ಎಂ.ಎ.ಟಿ. ಮಾದರಿಯ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಬೇಕೆಂದು ಗಂಭೀರವಾಗಿ ಅವರು ಹೇಳಿದ್ದಾರೆ. ಇದನ್ನು ನಮ್ಮ ಉನ್ನತ ಶಿಕ್ಷಣ ಸಚಿವರು ಗಮನಕ್ಕೆ ತೆಗೆದುಕೊಂಡು ಈ ಬಗ್ಗೆ ಸೂಕ್ತವಾದಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಇಷ್ಟೆಲ್ಲಾ ಇದ್ದರೂ ಕೂಡ ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣವನ್ನು ಹೊರತುಪಡಿಸಿ ತಮ್ಮ ಕಾಲೇಜುಗಳಲ್ಲಿ ಬೋಧನೆ ಮಾಡತಕ್ಕಂಥ ಸಾಂಪ್ರದಾಯಿಕ ಶಿಕ್ಷಣ ಏನು ಇದೆ ಇದು ವರ್ಷೇ ವರ್ಷೇ ಸಾಕಷ್ಟು ನಿರುದ್ಯೋಗಿಗಳನ್ನು ಉತ್ಪಾದನೆ ಮಾಡಲಿಕ್ಕೆ ಮೂಲವಾಗಿವೆ ವಿನಹ ಉದ್ಯೋಗಾಧಾರಿತ ಶಿಕ್ಷಣವನ್ನು ಕೊಡುವುದರಲ್ಲಿ ಅವುಗಳ ಪಾತ್ರ ಏನೇನು ಇಲ್ಲಿ ಎಂದು ಹೇಳಿದರೆ ಬಹುಶಃ ಅತಿಶಯೋಕ್ತಿಯಾಗಲಾರದು. ಈ ಕಾಲೇಜು ಮಟ್ಟದಲ್ಲಿ ಪದವೀ ತರಗತಿಗಳಲ್ಲಿ ವೃತ್ತಿ ನಿರತ ಹಾಗೂ

ಉದ್ಯೋಗಾಧಾರಿತ ಕೋರ್ಸುಗಳನ್ನು ಪ್ರಾರಂಭ ಮಾಡುವುದಕ್ಕೆ ಈ ಸರ್ಕಾರ ಸೂಕ್ತ ಕಾರ್ಯ ಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಉನ್ನತ ಶಿಕ್ಷಣ ಸಚಿವರ ಬಗ್ಗೆ ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಎಸಗಿದ್ದಾರೆಂದು ಅಪಾದಿಸಲಾಗಿರತಕ್ಕಂಥ ವಿಚಾರದ ಬಗ್ಗೆ ಹೇಳುವುದಕ್ಕೆ ನನ್ನ ಹತ್ತಿರ ಯಾವುದೇ ಪುರಾವೆಗಳಿಲ್ಲ, ಈ ಆಪಾದನೆ ಸಾರ್ವಜನಿಕರಲ್ಲಿ ಸಾಕಷ್ಟು ಕುತುಹಲ ಕೆರಳಿಸಿದೆ. ಚರ್ಚೆಗೆ ಒಂದು ಮುಖ್ಯವಾದ ವಿಷಯವಾಗಿದೆ. ಅವರು ಕಿಂಚಿತ್ತೂ ತಪ್ಪಿತಸ್ಥರಲ್ಲ ಎಂದು ಸಾಬೀತುಪಡಿಸುವ ಗುರುತರವಾದ ಹೊಣೆ ಇವೊತ್ತು ಶಿಕ್ಷಣ ಸಚಿವರ ಮೇಲೆ ಹಾಗೂ ಸರ್ಕಾರದ ಮೇಲೆ ಇದೆ. ಅದನ್ನು ಅದಷ್ಟು ಬೇಗ ವಿಚಾರಣೆ ಮಾಡಿಸಿ ಅವರು ತಪ್ಪಿತಸ್ಥರಲ್ಲ ಎಂದು ಪಾರದರ್ಶಕದ ರೀತಿಯಲ್ಲಿ ತೋರ್ಪಡಿಸಬೇಕೆಂದು ಉನ್ನತ ಶಿಕ್ಷಣ ಸಚಿವರಿಗೆ ತಿಳಿಸಬಯಸುತ್ತೇನೆ.

ಇನ್ನು ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢಶಿಕ್ಷಣಕ್ಕೆ ಸಂಬಂಧಪಟ್ಟಂತೆ ನನ್ನ ಭಾಷಣದಲ್ಲಿ ಹೆಚ್ಚು ಒತ್ತನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಹಂತದಲ್ಲಿ ಎಷ್ಟರಮಟ್ಟಿಗೆ ಶಿಕ್ಷಣದ ಒಂದು ಉತ್ತಮ ಬುನಾದಿಯನ್ನು ಹಾಕುತ್ತೇವೆ ನಂತರದ ಶಿಕ್ಷಣ ಅಷ್ಟೇ ಉತ್ತಮವಾಗಿ ಮುಂದುವರಿಯುತ್ತದೆಂದು ಬಹುಶಃ ತಾವೆಲ್ಲರೂ ಒಪ್ಪುತ್ತೀರಿ. ವಿದ್ಯಾರ್ಥಿಗಳು ಪದವಿಪೂರ್ವ ತರಗತಿಗಳಿಗೆ, ತಾಂತ್ರಿಕ, ವೈದ್ಯಕೀಯ ಶಿಕ್ಷಣಕ್ಕೆ ಹೋದಾಗ ಅವರು ಏನು ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಶಿಕ್ಷಣವನ್ನು ಪಡೆದಿರುತ್ತಾರೆ ಅದು ಅವರಿಗೆ ಉನ್ನತ ಶಿಕ್ಷಣ ಪಡೆಯುವಾಗ ಸಹಕಾರಿಯಾಗುತ್ತದೆ. ದುರಾದೃಷ್ಟವಶಾತ್ ಇವೊತ್ತು ಕೂಡ ಬಹುಸಂಖ್ಯಾತರು ಇರತಕ್ಕಂಥ ಗ್ರಾಮಾಂತರ ಪ್ರದೇಶದ ಮಕ್ಕಳು ಪಟ್ಟಣದ ಮಕ್ಕಳ ಸಮಕ್ಕೆ ನಿಂತು ಅವರಿಗೆ ಸರಿಸಾಟಿಯಾಗಿ ನಿಲ್ಲುವುದಕ್ಕೆ ಆಗುತ್ತಿಲ್ಲ. ಅದಕ್ಕೆ ನೂರೆಂಟು ಕಾರಣಗಳಿವೆ. ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಸದನದ ಗೌರವಾನ್ವಿತ ಸದಸ್ಯರುಗಳಿಗೆ ಇದು ಗೊತ್ತು.

6.10 ಪಿ.ಎಂ.

ಇಂಥ ಒಂದು ಸನ್ನಿವೇಶದಲ್ಲಿ ಒಂದು ಆಶಾದಾಯಕವಾದಂತಹ ವಾತಾವರಣವನ್ನು ಮೂಡಿಸುವುದರಲ್ಲಿ ಇವತ್ತು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ತಮ್ಮ ಮೂಲಕ ನನ್ನ ಒಂದು ಮೆಚ್ಚುಗೆ ಮಾತನ್ನು ಹೇಳಬಯಸುತ್ತೇನೆ. ಅವರ ಯಾವುದೇ ವ್ಯವಹಾರ ಸಾಕಷ್ಟು ಪಾರದರ್ಶಕತೆಯಿಂದ ಕೂಡಿದ್ದು, ಈ ಇಲಾಖೆಯಲ್ಲಿ ಇವತ್ತು ಉನ್ನತ ಮಟ್ಟದಲ್ಲಿ ಯಾವುದೇ ಲಂಚರುಷುವತ್ತುಗಳಿಗೆ ಅವಕಾಶ ಇಲ್ಲದಂತಾಗಿದೆ ಎನ್ನುವುದನ್ನು ಸ್ಪಷ್ಟಪಡಿಸುವುದರಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಿದರೆ ಅದು ಕೂಡ ಉತ್ಪ್ರೇಕ್ಷೆ ಮಾತು ಆಗುವುದಿಲ್ಲ. ಪ್ರಾಥಮಿಕ ಹಂತದಿಂದ ಹಿಡಿದು ಪ್ರೌಢ ಶಾಲೆ ಹಂತದವರೆಗೆ ಅವರು ಶಿಕ್ಷಕರನ್ನು ನೇಮಕಾತಿ ಮಾಡುವುದರಲ್ಲಾಗಲೀ, ಶಾಲಾ ಕಟ್ಟಡ ನಿರ್ಮಾಣ ಮಾಡಿಕೊಡುವುದರಲ್ಲಾಗಲೀ ಮತ್ತು ಶಾಲೆಗಳಿಗೆ ಸಲಕರಣೆಗಳನ್ನು ಸರಬರಾಜು ಮಾಡಿಕೊಡುವುದರಲ್ಲಾಗಲೀ ಅವರು ಹೆಚ್ಚಿನ ಕಳಕಳಿಯನ್ನು ಹೊಂದಿದ್ದಾರೆ. ಅವರು ಇನ್ನೂ ಕೂಡ ಹೆಚ್ಚಿನ ಪ್ರಾಮಾಣಿಕವಾಗಿ ಕಳಕಳಿಯಿಂದ ಮುಂದುವರೆಸಿ,

ಈ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಒಂದು ಉನ್ನತ ಮಟ್ಟದ ವ್ಯವಸ್ಥೆ ಆಗುವುದಕ್ಕೆ ಭದ್ರ ಬುನಾದಿಯನ್ನು ಹಾಕಬೇಕು. ಇದರಲ್ಲಿ ಶಿಕ್ಷಣದ ಬಗ್ಗೆ ಕಾಳಜಿ ಇರತಕ್ಕ ಎಲ್ಲರ ಪೂರ್ಣ ಬೆಂಬಲ ಇರುತ್ತದೆ. ಎನ್ನುವುದನ್ನು ತಮ್ಮ ಮೂಲಕ ಸ್ಪಷ್ಟಪಡಿಸುತ್ತೇನೆ. ಜೊತೆಗೆ ಅವರ ಇಲಾಖೆಯಲ್ಲಿ ಇವತ್ತು ಮೇಲ್ಮಟ್ಟದಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳ ಶಿಕ್ಷಣದ ಬಗೆಗಿನ ಬದ್ಧತೆ ಒಂದು ಕಮಿಟ್‌ಮೆಂಟ್ ಇವರು ಯಶಸ್ವಿಯಾಗುವುದರಲ್ಲಿ ಬಹಳಷ್ಟು ಸಹಕಾರಿ ಆಗಿದೆ. ಅಂಥ ಅಧಿಕಾರಿಗಳು ಇನ್ನೂ ಕೂಡ ಮಾದರಿಯಾಗಿ ಕೆಲಸ ಮಾಡಿಕೊಂಡು ಹೋಗುವುದಕ್ಕೆ ನಾವೆಲ್ಲರೂ ಸಹಕಾರ ಕೊಡಬೇಕು ಎನ್ನತಕ್ಕ ಮಾತನ್ನು ಹೇಳುತ್ತಾ, ಈ ನಮ್ಮ ಸದನದ ವಿಷಯ ಸಮಿತಿಯವರು ಈ ಪದವಿ ಪೂರ್ವ ಶಿಕ್ಷಣದ ಬಗ್ಗೆ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅದು ಕೂಡ ಸರ್ಕಾರಿ ತೀವ್ರವಾಗಿ ಗಮನಹರಿಸಬೇಕಾದಂತಹ ಅಂಶ. ಹಿಂದೆ ಕೆ.ಪಿ. ಸುರೇಂದ್ರನಾಥ್ ಸಮಿತಿಯನ್ನು ನೇಮಕ ಮಾಡಿ ಅವರು ಸಲ್ಲಿಸಿರತಕ್ಕ ವರದಿಯನ್ನು ಸರ್ಕಾರ ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕು ಎನ್ನತಕ್ಕಂಥದ್ದು ಒಂದು ವಿಚಾರ. ಜೊತೆಗೆ ಇನ್ನೊಂದು ವಿಚಾರವನ್ನು ಹೇಳುತ್ತೇನೆ. ವರ್ಷದ 365 ದಿವಸಗಳಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಕೇವಲ 210 ದಿವಸಗಳ ಕಾಲ ಮಾತ್ರ ಶಾಲೆಗಳು ನಡೆಯುತ್ತವೆ. ಪ್ರೌಢ ಶಿಕ್ಷಣದಲ್ಲೂ ಇಷ್ಟೆ. ಇತ್ತೀಚೆಗೆ ಆಗಿರತಕ್ಕ ಬೆಳವಣಿಗೆ ಎಂದರೆ ಪ್ರಾಥಮಿಕ ಹಾಗೂ ಪ್ರೌಢ ಹಿರಿಯ, ಕಿರಿಯ ಶಾಲೆಗಳಲ್ಲಿ ಒಂದು ಗಂಟೆ ಅವಧಿಯ ಪೀರಿಯಡ್‌ಗೆ ಬದಲಾಗಿ 40 ನಿಮಿಷಕ್ಕೆ ಕಡಿತಗೊಳಿಸಲಾಗಿದೆ. ಬಹುಶಃ ಬೋಧನೆ ಮಾಡತಕ್ಕ ಅನುಭವ ಇರತಕ್ಕಂಥವರಿಗೆ ಎಲ್ಲ ಗೊತ್ತಿದೆ. 40 ನಿಮಿಷದಲ್ಲಿ ಯಾವುದೇ ಒಂದು ವಿಷಯವನ್ನು ಸಮರ್ಪಕವಾಗಿ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಭೋಧನೆ ಮಾಡಲಿಕ್ಕೆ ಸಾಧ್ಯಇಲ್ಲ. ಕಾರ್ಯತಃ ಅನುಭವ ಇರತಕ್ಕವರ ಒಂದು ಪ್ರಾಮಾಣಿಕ ಅನಿಸಿಕೆ. ಇದನ್ನು ತಾವು ದಯವಿಟ್ಟು 40 ನಿಮಿಷದ ಒಂದು ಪೀರಿಯಡ್‌ಅನ್ನು ಮತ್ತೆ ಒಂದು ಗಂಟೆ ಕಾಲಾವಧಿಗೆ ಹೆಚ್ಚಿಸಬೇಕು ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆ. ಇನ್ನು ನೀವು ಶಿಕ್ಷಣಸಂಸ್ಥೆಗಳಿಗೆ ನೀಡುತ್ತಿರುವ ರಜೆಯನ್ನು ಕಡೇಪಕ್ಷ 50 ದಿವಸಕ್ಕೆ ಕಡಿತಗೊಳಿಸಬೇಕೆಂಬುದು ನನ್ನ ಪ್ರಾಮಾಣಿಕ ಅನಿಸಿಕೆ. ವರ್ಷದ 365 ದಿವಸಗಳಲ್ಲಿ ಕೇವಲ 210 ದಿವಸಗಳು ಮಾತ್ರ ಪಾಠ ನಡೆದರೆ ಇನ್ನು 115 ದಿವಸಗಳು ರಜೆ ಆಗುತ್ತವೆ. ಇದು ಸುಮಾರು ಹತ್ತಿರ 5 ತಿಂಗಳು 5 ದಿವಸ ಆಗುತ್ತದೆ. ಇದನ್ನು 50 ದಿವಸಕ್ಕೆ ಕಡಿಮೆ ಮಾಡಿ ಮತ್ತೆ 40 ನಿಮಿಷದ ಒಂದು ಪೀರಿಯಡ್‌ನ್ನು ಒಂದು ಗಂಟೆ ಅವಧಿಗೆ ಹೆಚ್ಚಿಸಬೇಕು. ಈ ಒಂದು ವಿಚಾರವನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು ಎನ್ನತಕ್ಕ ಮನವಿಯನ್ನು ತಮ್ಮ ಮೂಲಕ ನೀಡುತ್ತಿದ್ದೇನೆ. ಹಣಕಾಸಿನ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಅದಕ್ಕಾಗಿ ಹೈದರಾಬಾದ್ ಅಭಿವೃದ್ಧಿ ನಿಗಮ, ಮಲೆನಾಡು ಅಭಿವೃದ್ಧಿ ನಿಗಮ ಮತ್ತು ಬಯಲು ಸೀಮೆ ಅಭಿವೃದ್ಧಿ ನಿಗಮಗಳಿಂದ ಹಣವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಆದರೆ ಸನ್ಯಾನ್ಯ ಅಧ್ಯಕ್ಷರೆ ಬಯಲುಸೀಮೆ ಅಭಿವೃದ್ಧಿಗಾಗಿ ಈ ವರ್ಷ ಆಯವ್ಯಯದಲ್ಲಿ ಇಟ್ಟಿರತಕ್ಕ ಹಣ ಏನೇನೂ ಸಾಲದು. ಸುಮಾರು 79 ಶಾಸಕರು ಪ್ರತಿನಿಧಿಸತಕ್ಕಂಥ ಕ್ಷೇತ್ರ ಇದು. ವರ್ಷದ ಮೊದಲಿಗೆ ನಮಗೆ ಕಾಗದ ಬಂತು ಅದರಲ್ಲಿ 45 ಲಕ್ಷದ ಕ್ರಿಯಾಯೋಜನೆಯನ್ನು ಸಿದ್ಧಮಾಡಿ ಕಳುಹಿಸಿ ಎಂದಿದ್ದು, ಮೊನ್ನೆ 10 ಲಕ್ಷದ ಯೋಜನೆಯನ್ನು ಸಿದ್ಧಮಾಡಿ ಕಳುಹಿಸಿ ಎಂದಿದ್ದು, ಮೊನ್ನೆ10 ಲಕ್ಷದ ಕ್ರಿಯಾಯೋಜನೆಯನ್ನು

ಮಾಡಿಕಳುಹಿಸಿ ಎಂದು ಕಾಗದ ಬಂತು. ಒಂದು ಕ್ಷೇತ್ರಕ್ಕೆ 10 ಲಕ್ಷ ಬರಬಹುದು, 5 ಲಕ್ಷ ಬರಬಹುದು ಅದನ್ನು ಹೇಳಲಿಕ್ಕಾಗುವುದಿಲ್ಲ. ತಾವು ಆ ಕಡೆ ಗಮನಹರಿಸದೆ, ಹೆಚ್ಚಿನ ಸಂಪನ್ಮೂಲದ ಕೊರತೆ ಇದ್ದಲ್ಲಿ, ಇತರೆ ಬಾಬುಗಳಿಂದ ಎಲ್ಲಿ ಸಾಧ್ಯವೋ ಅಲ್ಲಿಂದ ಹಣ ತರಿಸಿಕೊಂಡು ತಾವು ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಗಳಿಗೆ ಇನ್ನೂ ಹೆಚ್ಚಿನ ಮೂಲಭೂತ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರವನ್ನು ಸನ್ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಗಮನಕ್ಕೆ ತರಬಯಸುತ್ತೇನೆ. ಸರ್ಕಾರ ಯಾವುದೇ ಇಲಾಖೆಗಳಿಂದ ಸಾಮಗ್ರಿಗಳನ್ನು ವಿತರಣೆ ಮಾಡುತ್ತದೆ ಎಂದಾಗ ಅಲ್ಲಿ ಒಂದು ವರ್ಗದ ಸೃಷ್ಟಿಯಾಗುತ್ತದೆ. ಹೇಗೋ ಮಾಡಿ ಟೆಂಡರ್ ಮೂಲಕ ಅಥವಾ ಇನ್ನು ಯಾವುದರ ಮೂಲಕವೋ ಸಾಮಾನು ಸರಬರಾಜುಗಳನ್ನು ಸರಬರಾಜು ಮಾಡಲಿಕ್ಕೆ ಆದೇಶವನ್ನು ಪಡೆದುಕೊಂಡು ಕೊನೆಗೆ ತೀರಾ ಕಳಪೆಯಾದ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಾರೆ. ಅವು ಯಾವುದೇ ಒಂದು ಗುಣಮಟ್ಟವನ್ನು ಹೊಂದಿರದೆ ಬಹಳ ವರ್ಷ ಬಾಳಿಕೆ ಬರುವುದು ಇಲ್ಲ. ಹೋದವರ್ಷ ನನ್ನ ಗಮನಕ್ಕೆ ಬಂದಂತಹ ಒಂದು ವಿಚಾರವನ್ನು ಈಗ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಸಾಧನೆಯಲ್ಲಿ ಹೇಳಿದ್ದೀರಿ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಎಂದು. ಇದನ್ನು ಹೋದವರ್ಷ ಮಾಡಿಸಿದ್ದೀರಿ ಇದನ್ನು ಎಲ್ಲರೂ ಮೆಚ್ಚಬೇಕು. ಒಂದು ಶಾಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗ ನಾನು ಅಲ್ಲಿ ಒಂದು ತರಿಸಿದಂತಹ ಬ್ಯಾಗ್‌ನ್ನು ನೋಡಿ ಅದರ ಬಗ್ಗೆ ವಿಚಾರಿಸಿದೆ. ಹೇಗೆ ಇಷ್ಟು ಗುಣಮಟ್ಟವನ್ನು ಕಾಪಾಡ ತಕ್ಕ ಬ್ಯಾಗನ್ನು ತರಿಸಿಕೊಂಡಿದ್ದೀರಿ ಎಂದು ಕೇಳಿದೆ. ಆಗ ಅವರು ಒಂದು ವಿಚಾರ ಹೇಳಿದರು. ಶಿಕ್ಷಣ ಇಲಾಖೆಯ ಆಯುಕ್ತರಾದಂತಹ ಮಾನ್ಯ ಸಂಜಯ್ ಕೌಲ್‌ರವರು ಬಳೇಪೇಟೆ, ಚಿಕ್ಕಪೇಟೆ, ಮತ್ತು ಅವೆನ್ಯೂ ರಸ್ತೆಗಳಲ್ಲಿ ತಾವೇ ಸ್ವತಃ ಸುತ್ತಿ ಗುಣಮಟ್ಟದ ನಿರ್ಧಾರ ಮಾಡಿ ಆ ಬ್ಯಾಗನ್ನು ಕೊಂಡುತಂದು ಎಲ್ಲರಿಗೂ ವಿತರಣೆ ಮಾಡಿದ್ದಾರೆ, ಎನ್ನುವ ವಿಚಾರ ಹೇಳಿದರು. ಇಂಥ ವಿಚಾರವನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಇಂಥ ಸಾಮಗ್ರಿಗಳನ್ನು ಕೊಡುವಾಗ ಅದು ಕೆಲವಾರು ವರ್ಷಗಳಾದರೂ ಬಾಳಿಕೆ ಬರಬೇಕು. ಈ ಸಾರಿ ಏನು ಪ್ರಾಥಮಿಕ ಶಾಲೆಗಳಿಗೆ ಸಲಕರಣೆಗಳು ಸಾಮಗ್ರಿಗಳನ್ನು ಕೊಡತಕ್ಕ ಕ್ರಮ ಹಾಕಿಕೊಂಡಿದ್ದೀರಿ ಅದನ್ನು ಇದೇ ರೀತಿ ಉತ್ತಮ ಗುಣಮಟ್ಟದ ಸಲಕರಣೆಗಳನ್ನು ಸರಬರಾಜು ಮಾಡತಕ್ಕ ಗುತ್ತಿಗೆದಾರರಿಗೆ ನೇಮಿಸಬೇಕು. ಆಗ ತಾವು ಇನ್ನೂ ಹೆಚ್ಚಿನ ಕೀರ್ತಿಯನ್ನು ಈ ಇಲಾಖೆಯಲ್ಲಿ ಪಡೆಯಬಹುದು ಎನ್ನತಕ್ಕ ಸಲಹೆಯನ್ನು ಇಲ್ಲಿ ಮಂಡಿಸಬಯಸುತ್ತೇನೆ. ಇನ್ನು ಸನ್ಮಾನ್ಯ ಉಪಾಧ್ಯಕ್ಷರೆ, ಶ್ರೀಮಾನ್ ಗೋವಿಂದೇಗೌಡರು 1994-95ನೇ ಸಾಲಿನಲ್ಲಿ ಸಚಿವರಾದ ಮೇಲೆ ಒಂದು ಹೇಳಿಕೆಯನ್ನು ಕೊಟ್ಟರು. ಹೆಚ್ಚುವರಿ ಶಾಲೆಗಳಿಗೆ ಮಂಜೂರು ಕೊಡುವುದರಲ್ಲಿ ನನಗೆ ನಂಬಿಕೆ ಇಲ್ಲ. ಈಗ ಹಾಲಿ ನಡೆಯತಕ್ಕ ಸಂಸ್ಥೆಗಳನ್ನು ಸಮರ್ಪಕಗೊಳಿಸಿ, ಅವಕ್ಕೆ ಬೇಕಾದ ಸಿಬ್ಬಂದಿಯನ್ನು ಕೊಟ್ಟು ಸಲಕರಣೆಗಳನ್ನು ಕೊಟ್ಟು ಅವು ವ್ಯವಸ್ಥಿತ ಶಾಲೆಗಳಾದ ಮೇಲೆ ಹೊಸ ಶಾಲೆಗಳ ಯೋಚನೆ ಎಂದರು. ಅವರ ಪ್ರಾಕ್ಟಿಕಲ್ ಥಿಂಕಿಂಗ್ ಕೇಳಿ ಬಹಳ ಸಂತೋಷವಾಯ್ತು. ಅವರು ಒಳ್ಳೆಯ ಪರಂಪರೆಯನ್ನು ಬೆಳಿಸಿಕೊಂಡು ಬರುತ್ತಿದ್ದಾರೆ ಎಂದು

ಸಂತೋಷವಾಯ್ತು. ಆದರೂ ನಮ್ಮ ಈ ರಾಜಕೀಯ ವ್ಯವಸ್ಥೆಯಲ್ಲಿ ಅವರ ಆ ಒಂದು ಬದ್ಧತೆ ನಿರ್ಧಾರ ಅನುಷ್ಠಾನಗೊಳಿಸುವುದರಲ್ಲಿ ಎಡವುತ್ತಿದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಉದಾಹರಣೆಗೆ ನಮ್ಮ ರಾಜ್ಯದಲ್ಲಿ ಅನೇಕ ಖಾಸಗಿ ಶಾಲೆಗಳು ಈಗಾಗಲೇ ಪ್ರಾರಂಭವಾಗಿ ಕೆಲಸ ಮಾಡುತ್ತಿವೆ. 10 ವರ್ಷಗಳಾದರೂ ಪ್ರಾಥಮಿಕ ಶಾಲೆಗಳಾಗಲೀ, ಪ್ರೌಢಶಾಲೆಗಳಾಗಲೀ ಅನುದಾನಕ್ಕೆ ಒಳಪಟ್ಟಿಲ್ಲ. ಇದು ನಮ್ಮ ಕಾಂಗ್ರೆಸ್ ಪಕ್ಷ ಇದ್ದಾಗಲೇ ಪ್ರಾರಂಭವಾಯ್ತು. ಖಾಸಗಿ ಶಾಲೆಯನ್ನು ಖಾಯಂ ಅನುದಾನ ರಹಿತ ಎಂದು ಮಾಡಿದರು. 14 ವರ್ಷಗಳವರೆಗೆ ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕು ಎಂದು ಸಂವಿಧಾನದಲ್ಲಿ ನಿರ್ದೇಶನವಿದೆ. ಯಾವುದೇ ಸರ್ಕಾರವಾದರೂ ಕೂಡ ಪ್ರೌಢ ಶಿಕ್ಷಣದವರೆಗೆ ಖಾಸಗಿ ಶಾಲೆಯಲ್ಲಾಗಲಿ ಅಥವಾ ಸರ್ಕಾರಿ ಶಾಲೆಯಲ್ಲಾಗಲಿ, ಅಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ವರ್ಗಕ್ಕೆ ಪೂರ್ಣವಾದ ವೇತನವನ್ನು ಕೊಟ್ಟು ಈ ವಿದ್ಯಾಭ್ಯಾಸವನ್ನು ಸಮರ್ಪಕವಾಗಿ ನಡೆಸಿಕೊಂಡು ಹೋಗುವಂಥದ್ದಕ್ಕೆ ತಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಈ ವರ್ಷದ ತಮ್ಮ ಆಯವ್ಯಯದ ಪ್ರಸ್ತಾವನೆಯಲ್ಲಾಗಲಿ ಅಥವಾ ಬೇಡಿಕೆಗಳ ಪ್ರಸ್ತಾವನೆಯಲ್ಲಾಗಲಿ ಅನುದಾನರಹಿತ ಶಾಲೆಗಳಿಗೆ ಅನುದಾನವನ್ನು ಕೊಡತಕ್ಕಂಥ ಪ್ರಸ್ತಾವನೆ ಹೆಚ್ಚು ಕಾಣುತ್ತಿಲ್ಲ. ದಯಮಾಡಿ ಈ ಬಗ್ಗೆ ಬಹಳ ಸುಧೀರ್ಘವಾಗಿ ಆಲೋಚನೆಯನ್ನು ಮಾಡಿ ಮುಂದಿನ ಆರ್ಥಿಕ ವರ್ಷದಿಂದಲಾದರೂ ಸುಮಾರು 10 ವರ್ಷವಾಗಿರತಕ್ಕಂಥ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ತಾವು ಅನುದಾನವನ್ನು ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆನ್ನುವ ಪ್ರಸ್ತಾವನೆಯನ್ನು ನಿಮ್ಮಮುಂದಿಡುತ್ತೇನೆ. ಇನ್ನು ನನ್ನ ಅನುಭವಕ್ಕೆ ಬಂದಿರತಕ್ಕಂಥ ಬಹು ಮುಖ್ಯವಾದ ವಿಚಾರವನ್ನು ತಮಗೆ ಹೇಳಬಯಸುತ್ತೇನೆ. ಕೆಲವು ಕಡೆ ಖಾಸಗಿ ಶಾಲೆಗಳನ್ನು ಪ್ರಾರಂಭ ಮಾಡವುದು ಇಂದು ಫ್ಯಾನ್ಸಿ ಆಗಿಬಿಟ್ಟಿದೆ. ನಾನು ಇದನ್ನು ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಹೇಳುತ್ತೇನೆ ಹೊರತು ಪಟ್ಟಣ ಪ್ರದೇಶಗಳ ವಿಚಾರದ ಬಗ್ಗೆ ನಾನು ಹೇಳುವುದಿಲ್ಲ. ನನ್ನ ಊರಿನಲ್ಲಿಯೇ ಸುಮಾರು 10 ವರ್ಷಗಳ ಹಿಂದೆಯೇ ಒಂದು ಶಾಲೆ ಪ್ರಾರಂಭವಾಗಿದ್ದು ಇನ್ನೂ ಅದಕ್ಕೆ ಅನುದಾನ ದೊರಕಿಲ್ಲ. ಆದರೆ, ಅದರ ಪಕ್ಕದ ಊರಿನಲ್ಲಿಯೇ ಇನ್ನೊಂದು ಪ್ರೌಢಶಾಲೆ ಆಗಿದೆ, ಇದಕ್ಕೆ ತಾವು ನಿರ್ದಿಷ್ಟವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಬಹುಶಃ 3 ಅಥವಾ 5 ಕಿ.ಮಿ. ವ್ಯಾಪ್ತಿಯೊಳಗೆ ಮತ್ತೊಂದು ಪ್ರೌಢಶಾಲೆಯನ್ನು ತೆರೆಯಲು ಅನುಮತಿಯನ್ನು ಕೊಡುವುದಿಲ್ಲವೆನ್ನುವ ನಿಬಂಧನೆಯನ್ನು ತಾವು ಖಡಾಖಂಡಿತವಾಗಿ ಹಾಕಿಕೊಳ್ಳಬೇಕಾಗುತ್ತದೆ. ಈ ರೀತಿ ಮಾಡದಿದ್ದರೆ ಊರಿಗೊಂದು ಪ್ರೌಢಶಾಲೆಯನ್ನು ಯಾವ ಸರ್ಕಾರವೂ ಕೂಡ ನಿರ್ವಹಣೆಯನ್ನು ಮಾಡವುದಕ್ಕಾಗುವುದಿಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ಖಾಸಗಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಅನುದಾನವನ್ನು ಕೊಡತಕ್ಕಂಥ ಒಂದು ಉಪಯುಕ್ತ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕಾಗುತ್ತದೆ. ಏಕೆಂದರೆ ನಿಮಗೆ ಮತ್ತು ಮಾನ್ಯ ಉಪಾಧ್ಯಕ್ಷರಿಗೂ ಗೊತ್ತಿದೆ. 10 ವರ್ಷಗಳ ಕಾಲ ಇಂಥ ಶಾಲೆಗಳಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರಿಗೆ ಸರಿಯಾದ ಸಂಬಳವನ್ನು ಕೊಡುವುದಿಲ್ಲ. ಪುಕ್ಕಟೆಯಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಅಥವಾ ಸಂಬಳ ಕೊಟ್ಟರೂ 200 ರೂಪಾಯಿಗಳಿಂದ 500 ರೂಪಾಯಿಗಳನ್ನು ಕೊಡುತ್ತಾರೆ. ಈ 500-00

ರೂಪಾಯಿಗಳನ್ನು ತೆಗೆದುಕೊಂಡು ಒಬ್ಬ ಬಿ.ಎಸ್ಸಿ : ಬಿಎಡ್ ಅಥವಾ ಬಿ.ಎ. : ಬಿಎಡ್ ಮಾಡಿರತಕ್ಕಂಥ ಪದವೀಧರ ವರ್ಷಾನುಗಟ್ಟಲೆ ಈ ಸಂಬಳದಲ್ಲೇ ಕೆಲಸ ಮಾಡಬೇಕಾಗುತ್ತದೆ. ಈತನಿಗೆ ಮದುವೆಯಾಗಿ ಮಕ್ಕಳುಗಳಿರುತ್ತವೆ, ಇಂಥವನು ಹೇಗೆ ಜೀವನ ನಿರ್ವಹಣೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ತಾವು ಬಹಳ ತೀವ್ರವಾಗಿ ಆಲೋಚನೆಯನ್ನು ಮಾಡಬೇಕಾಗುತ್ತದೆ. ಇದರ ಜೊತೆಗೆ ಸುಮಾರು 10-12 ವರ್ಷಗಳಿಂದ ಆರ್ಥಿಕ ಮಿತವ್ಯಯ ಜಾರಿಯಲ್ಲಿದೆ, ಮಿತವ್ಯಯ ಜಾರಿಯಲ್ಲಿದೆ ಎಂದು ಹೇಳಿಕೊಂಡು ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡುವುದರಲ್ಲಿ ತಡೆಯನ್ನು ಹಾಕಿದ್ದೀರಿ. ಯಾವುದೇ ಪ್ರೌಢಶಾಲೆಯಲ್ಲಾಗಲಿ, ಕಾಲೇಜ್‌ಗಳಲ್ಲಾಗಲಿ ಬೋಧಕೇತರ ಸಿಬ್ಬಂದಿ ಇಲ್ಲದಿದ್ದರೆ ಆ ಕಾಲೇಜು ಹೇಗೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಾವು ಆಲೋಚನೆ ಮಾಡಬೇಕಾಗುತ್ತದೆ. ಆದುದರಿಂದ, ಆರ್ಥಿಕ ಮಿತವ್ಯ/ಯವನ್ನು ಸಡಿಲಿಸಿ ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಬೇಕೆನ್ನುವ ನನ್ನ ಮನವಿಯನ್ನು ನಿಮ್ಮಮುಂದಿಡುತ್ತಿದ್ದೇನೆ. ಇನ್ನು ತಮ್ಮ ಸಾಧನೆಗಳ ಪಟ್ಟಿಯಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದೀರಿ. 877 ಹೊಸ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದೀರಿ, ಅದು ನಿಜ. 18,650 ಶಿಕ್ಷಕರ ನೇಮಕಾತಿ ಮಾಡಿ ದಾಖಲೆ ನಿರ್ಮಾಣ ಮಾಡಿದ್ದೇವೆಂದು ಹೇಳಿಕೊಂಡಿದ್ದೀರಿ, ಅದೂ ನಿಜ. ಆದರೆ ನೇಮಕಾತಿ ನಿಯಮಗಳನ್ನು ಹಿಂದೆ ಶಿಕ್ಷಣ ಮಂತ್ರಿಗಳಾಗಿದ್ದಂಥ ಶ್ರೀ ಕೆ.ಹೆಚ್. ರಂಗನಾಥ್‌ರವರು ಮತ್ತು ಶ್ರೀ ವೀರಪ್ಪ ಮೊಯ್ಲಿಯವರು ಹಾಕಿಕೊಟ್ಟಿರುವಂಥ ಪದ್ಧತಿಯನ್ನು ತಾವು ಅಳವಡಿಸಿಕೊಂಡಿದ್ದೀರಿ. ಇದರಿಂದ ನಿಮಗೂ ಶ್ರೇಯಸ್ಸು, ನಿಮ್ಮ ಸರ್ಕಾರಕ್ಕೂ ಒಳ್ಳೆಯ ಹೆಸರು ಮತ್ತು ರಾಜ್ಯದಲ್ಲಿ ಈ ಶಿಕ್ಷಣ ಭ್ರಷ್ಟಾಚಾರದಿಂದ ವಿಮುಕ್ತವಾಗುವುದಕ್ಕೆ, ಶಿಕ್ಷಣ ಇಲಾಖೆಯಿಂದ ನೇಮಕಾತಿಯಲ್ಲಿ ಭ್ರಷ್ಟಾಚಾರದ ಸೋಂಕು ಇಲ್ಲದೇ ಮಾಡಿ ಒಂದು ಒಳ್ಳೆಯ ಹೆಸರು ಪಡೆಯುವುದಕ್ಕೆ ಅವಕಾಶವಾಯಿತು, ಇದರ ಕೀರ್ತಿ ತಮಗೆ ಎಷ್ಟು ಸಲ್ಲುತ್ತದೋ ಅಷ್ಟೇ ಕೀರ್ತಿ ಸನ್ಮಾನ್ಯ ವೀರಪ್ಪ ಮೊಯ್ಲಿಯವರಿಗೂ ಸಲ್ಲುತ್ತದೆ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಏಕೆಂದರೆ, ಕಳೆದ ಅವಧಿಯಲ್ಲಿ ನಾವೆಲ್ಲಾ ಅವರನ್ನು ಪಟ್ಟು ಹಿಡಿದು ನೀವು ನೇಮಕಾತಿ ಸಮಿತಿಗಳನ್ನು ರಚನೆ ಮಾಡಬೇಕು, ಜಿಲ್ಲಾ ಮಟ್ಟದಲ್ಲಿ ಉಪಾಧ್ಯಾಯರನ್ನು ನೇಮಕಾತಿ ಮಾಡುವುದಕ್ಕೆ ಸಮಿತಿಯನ್ನು ರಚನೆ ಮಾಡಬೇಕು ಮತ್ತು ಇದರಲ್ಲಿ ನಮ್ಮ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡಬೇಕನ್ನುವ ಒಂದು ಪಟ್ಟನ್ನಿಡಿದಾಗ ಅವರು ಸುತರಾಂ ಒಪ್ಪಿಕೊಳ್ಳಲಿಲ್ಲ. ಆ ರೀತಿ ಮಾಡುವುದು ಬೇಡ, ಒಂದು ವೇಳೆ ಆ ರೀತಿ ಮಾಡಿದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ, ನಿಮಗೆ ಕೆಟ್ಟ ಹೆಸರು ಬರುತ್ತದೆ ಮತ್ತು ಮಂತ್ರಿಯಾದ ನನಗೂ ಕೆಟ್ಟ ಹೆಸರು ಬರುವುದರಿಂದ ಆ ರೀತಿ ಮಾಡುವುದು ಬೇಡವೆಂದು ಹೇಳಿ ಖಡಾಖಂಡಿತವಾಗಿ ನಮ್ಮಮನವಿಯನ್ನು ನಿರಾಕರಿಸಿ ವಯಸ್ಸು, ರೋಸ್ಟರ್ ಮತ್ತು ಅರ್ಹತೆ ಆಧಾರದ ಮೇಲೆ ಮನೆ ಬಾಗಿಲಿಗೆ ಕೆಲಸದ ಆದೇಶ ಬರುವಂತೆ ಮಾಡಿದರು. ಅದನ್ನೇ ಇವೊತ್ತು ನೀವು ಅಳವಡಿಸಿಕೊಂಡು ಬಂದಿದ್ದರಿಂದ ಇದು ನಿಜವಾಗಲೂ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತರುವಂಥ ಕಾರ್ಯವಾಗಿದೆ. ಇದನ್ನು ಇನ್ನು ಮುಂದೆಯೂ ಮುಂದುವರಿಸಿಕೊಂಡು ಹೋಗಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು

ಆಯವ್ಯಯದಲ್ಲಿ ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳಿಗಾಗಿ ನಿವಾಸಿ ಶಾಲೆಗಳನ್ನು ತೆರೆಯುವುದಕ್ಕಾಗಿ ಈ ಸಾಲಿನಲ್ಲಿ ಯಾವುದೇ ಹಣವನ್ನು ನಿಗದಿಪಡಿಸಿಲ್ಲ. ಆದುದರಿಂದ, ಇದನ್ನು ಸರ್ಕಾರ ಕೈ ಬಿಟ್ಟಿದೆ ಎನ್ನತಕ್ಕಂಥ ಅನುಮಾನ ನಮಗೆ ಬರುತ್ತಿದೆ. ದಯವಿಟ್ಟು ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಸ್ಪಷ್ಟೀಕರಣವನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಗೌರವ ಶಿಕ್ಷಕರ ಸಮಸ್ಯೆ ಇತ್ಯರ್ಥವಾಗದೆ ಹಾಗೆ ಉಳಿದಿದೆ. ಇದೇನೂ ಪರಿಹಾರ ಕಾಣದೇ ಇರತಕ್ಕಂಥ ಸಮಸ್ಯೆಯೇನೂ ಖಂಡಿತ ಅಲ್ಲ. ಸರ್ಕಾರ ಈ ಬಗ್ಗೆ ಸ್ವಲ್ಪ ಉದಾರವಾಗಿ ವರ್ತಿಸಿದರೆ ಈ ಹಿಂದೆ ಜಿಲ್ಲಾ ಪರಿಷತ್ ನಲ್ಲಿ ನೇಮಕಗೊಂಡಿರತಕ್ಕಂಥ, ಪಿ.ಯು.ಸಿ. ವರೆಗೆ ಶಿಕ್ಷಣ ಪಡೆದಿರುವಂಥ ಹಾಗೂ ಶಿಕ್ಷಕ ತರಬೇತಿಯನ್ನು ಪಡೆಯದೇ ಇರತಕ್ಕಂಥ ಸುಮಾರು 200 ಜನರು ಗೌರವ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಜೊತೆಗೆ ಇನ್ನೂ ಕೆಲವು ಮಂದಿ ಇದ್ದರೂ ಇರಬಹುದು. ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿಯವರೆವಿಗೆ ಸರ್ಕಾರ ಅರೆಕಾಲಿಕ ಶಿಕ್ಷಕರನ್ನು, ಗುತ್ತಿಗೆ ಶಿಕ್ಷಕರನ್ನು ಹಾಗೂ ಅನೇಕ ವಿಧದಲ್ಲಿ ಸರ್ಕಾರಿ ಶಾಲೆಗಳಿಗೆ ಸೇರಿಕೊಂಡಂಥ ಸಾವಿರಾರು ಶಿಕ್ಷಕರುಗಳಿಗೆ ಸರ್ಕಾರ ಖಾಯಂ ಉದ್ಯೋಗವನ್ನು ಒದಗಿಸಿಕೊಟ್ಟಿದೆ. ಇದರ ಜೊತೆಗೆ ಈ ಹಿಂದೆ ಒಂದು ಭಾರಿ ಶಿಕ್ಷಕರ ಕೊರತೆಯಾದಾಗ ಪ್ರಾಥಮಿಕ ಶಾಲೆಗಳಿಗೆ ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರುವಂಥ ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನಾಗಿ ನೇಮಕ ಮಾಡಿಕೊಳ್ಳಲಾಗಿತ್ತು. ತದನಂತರ ಅವರನ್ನು ಖಾಯಂ ಮಾಡಬೇಕು ಎನ್ನುವ ವಿಚಾರ ಬಂದಾಗ ತಾವು ಖಾಯಂ ಮಾಡಿ ಅವರಿಗೆ ಸಿ.ಸಿ.ವಿ.ಸಿ. ಕೋರ್ಸ್‌ನಲ್ಲಿ ತರಬೇತಿಯನ್ನು ತಾವು ಕೊಟ್ಟಿರಿ, ಅಂದರೆ ಕರೆಸ್ಪಾಂಡೆನ್ಸ್ ಕಮ್ ಒಕೆಶನಲ್ ಕೋರ್ಸ್ ಮಾದರಿ. ಆ ವಿಧದಲ್ಲಿ ಅವರಿಗೆ ತರಬೇತಿಯನ್ನು ಕೊಟ್ಟು ಅವರನ್ನು ಶಿಕ್ಷಣ ಇಲಾಖೆಗೆ ಸರ್ಕಾರ ಸೇರಿಸಿಕೊಂಡಿತು. ಅದೇ ರೀತಿ ಈಗ ಉಳಿದಿರತಕ್ಕಂಥ ಅದರಲ್ಲೂ ಪರಿಶಿಷ್ಟ ಜಾತಿಯವರೇ ಹೆಚ್ಚು ಇರತಕ್ಕಂಥ ಸುಮಾರು 200 ರಿಂದ 300 ಜನ ಗೌರವ ಶಿಕ್ಷಕರು ಏನಿದ್ದಾರೆ ಇವರನ್ನೂ ಕೂಡ ತಾವು ಖಾಯಂ ಮಾಡಿ ಇವರಿಗೂ ಕೂಡ ಸಿ.ಸಿ.ವಿ.ಸಿ. ಮಾದರಿಯ ತರಬೇತಿಯನ್ನು ಕೊಡಿಸಿಕೊಡಬೇಕು. ಏಕೆಂದರೆ ಈ ಗೌರವ ಶಿಕ್ಷಕರಿಗೆ ಈಗಾಗಲೇ 35 ಅಥವಾ 36 ವರ್ಷಗಳಾಗಿ ಈಗಾಗಲೇ ಮದುವೆಗೆ ಬಂದ ಮಗಳು ಇರುವ ಪ್ರಸಂಗಗಳಿವೆ. ಇಂಥ ಪರಿಸ್ಥಿತಿಯಲ್ಲಿ ಈ ಶಿಕ್ಷಕರುಗಳು ಕೇವಲ 600 ರೂಪಾಯಿಗಳು ಅಥವಾ 800 ರೂಪಾಯಿಗಳ ಸಂಬಳವನ್ನು ಪಡೆದುಕೊಂಡು ಜೀವನ ನಿರ್ವಹಣೆ ಮಾಡುವುದು ಬಹಳ ಕಷ್ಟವಾಗುತ್ತದೆ. ತಾವು ಈ ವಿಚಾರದಲ್ಲಿ ಸ್ವಲ್ಪ ಉದಾರವಾಗಿ ವರ್ತಿಸಿ ಈ ಶಿಕ್ಷಕರುಗಳನ್ನು ಆದಷ್ಟು ಬೇಗ ಖಾಯಂ ಮಾಡಿ ಶಿಕ್ಷಣ ಇಲಾಖೆಗೆ ಸೇರಿಸಿಕೊಳ್ಳಬೇಕನ್ನುವ ನನ್ನ ಮನವಿಯನ್ನು ನಿಮ್ಮ ಮುಂದಿಡುತ್ತೇನೆ. ಇನ್ನು ಮತ್ತೊಮ್ಮೆ ಈ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅದರಲ್ಲೂ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು ಯಾವುವು ಈ ವರೆವಿಗೂ ಅನುದಾನರಹಿತವಾಗಿ ಕೆಲಸ ಮಾಡುತ್ತಿವೆ. ಅವುಗಳನ್ನು ಮೆರಿಟ್ ಆಧಾರದ ಮೇಲೆ ಮತ್ತು ಸರ್ಕಾರದ ಎಲ್ಲಾ ನಿಬಂಧನೆಗೆ ಒಳಪಟ್ಟು ಸರ್ಕಾರ ಹಾಕಿರತಕ್ಕಂಥ ಎಲ್ಲಾ ಷರತ್ತುಗಳನ್ನು ಪೂರೈಸಿರುವಂಥ ಶಾಲೆಗಳನ್ನು ಮುಂದಿನ ಆರ್ಥಿಕ ವರ್ಷದಿಂದಲಾದರೂ ಅನುದಾನಕ್ಕೆ ಒಳಪಡಿಸತಕ್ಕಂಥ ಒಂದು ಪ್ರಕ್ರಿಯೆಯನ್ನು ತಾವು ಈಗಿನಿಂದಲೇ ಪ್ರಾರಂಭ ಮಾಡಬೇಕು.

ಆ ರೀತಿ ಮಾಡಿ ತಾವು ಹೆಚ್ಚಿನ ಕೀರ್ತಿಯನ್ನು ಪಡೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೆ, 1997-98ನೇ ಸಾಲಿನ ಆಯವ್ಯಯದಲ್ಲಿ ಈ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅದರಲ್ಲೂ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳನ್ನು ಅನುಧಾನಕ್ಕೆ ಒಳಪಡಿಸತಕ್ಕಂಥ ಪ್ರಸ್ತಾವನೆ ಇಲ್ಲದೇ ಇರುವುದರಿಂದ ಅದೊಂದು ಕಾರಣಕ್ಕಾಗಿ ತಮ್ಮ 1997-98ನೇ ಸಾಲಿನ ಬೇಡಿಕೆಗಳನ್ನು ನಾನು ವಿರೋಧಿಸುತ್ತ ನನಗೆ ಇಷ್ಟು ಮಾತಗಳನ್ನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಅಭಯಾರಣ್ಯ ಮಧ್ಯದಲ್ಲಿ ಹಿಂದುಳಿದ ರೈತರು ಬೆಳೆದ ಬೆಳೆಗಳನ್ನು ನಾಶಮಾಡಿರುವುದು

+ ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ (ಗೋಕಾಕ್ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ ನಾನು ಕಳೆದ ತಿಂಗಳು 30ನೇ ತಾರೀಖಿನ ದಿವಸ ಕೇಳಿದ ಪ್ರಶ್ನೆಗೆ ಅರಣ್ಯ ಸಚಿವರು ಕೇವಲ ಅಧಿಕಾರಿಗಳ ಉತ್ತರವನ್ನು ಪುನರಾವರ್ತನೆ ಮಾಡಿದ್ದಾರೆ. ಅದು ಸಮಾಧಾನಕರವಾಗಿಲ್ಲ. ರೈತರಿಗೆ ರಕ್ಷಣೆ ಕೊಟ್ಟು ರೈತರ ಹಿತವನ್ನು ಕಾಪಾಡಲಿಕ್ಕೆ ಇದ್ದಂಥ ನಮ್ಮ ಸರ್ಕಾರ ಕಳೆದ ತಿಂಗಳ ಜುಲೈನಲ್ಲಿ ಅರಣ್ಯ ಇಲಾಖೆಯಿಂದ 1975 ರಿಂದ ಸಾಗುವಳಿ ಮಾಡಿಕೊಂಡು ಬಂದಂಥ ಹಿಂದುಳಿದ ಜನಾಂಗಕ್ಕೆ ಒಳಪಟ್ಟಂಥ - ರೈತರು ಬೆಳೆಗಳನ್ನು ನಾಶಮಾಡಿಕೊಂಡು ಅದಕ್ಕೆ ಪರಿಹಾರ ಇಲ್ಲದೆ ಕೊರಗುವಂಥ ಪರಿಸ್ಥಿತಿ ಬಂದಿದೆ. ಅದಕ್ಕೆ ಅರಣ್ಯ ಸಚಿವರು ಕೊಟ್ಟಂಥ ಉತ್ತರದಲ್ಲಿ ಆದಂಥ ಬೆಳೆಗಳಿಗೆ ಪರಿಹಾರ ಇಲ್ಲವೆಂದು ಹೇಳಿದ್ದಾರೆ. ಆ ಮೇಲೆ 80 ಹೆಕ್ಟೇರ್ ಜಮೀನು ವಶಪಡಿಸಿಕೊಳ್ಳುವಂಥ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ನಾವು ಕೇಳುವಂಥ ಜಮೀನು ಕೇವಲ 23 ಹೆಕ್ಟೇರ್, 23 ಹೆಕ್ಟೇರ್ ನಲ್ಲಿ ಮಾತ್ರ ಅವರು ಬೆಳೆಗಳನ್ನು ನಾಶ ಮಾಡಿದ್ದಾರೆ. ಆ ಬೆಳೆಗಳನ್ನು ನಾಶ ಮಾಡುವಂಥ ಒಂದು ಪದ್ಧತಿ ಎಂದರೆ ಮಿಲ್ಟ್ರೀ ತರಹ ಬಂದೂಕುಗಳನ್ನು ಹಿಡಿದುಕೊಂಡು, ಹೆಲ್ಮೆಟ್ ಹಾಕಿಕೊಂಡು, ಸುತ್ತುಕಟ್ಟಿ ನಿಂತು ಎಲ್ಲ ರೈತರನ್ನು ಹೆದರಿಸಿ ಅವರನ್ನು ಹೊಡೆದು ಅವಾಚ್ಯ ಶಬ್ಧಗಳಿಂದ ಬೈದು ಹೀನಾಯವಾಗಿ ಅವರ ಮೇಲೆ ಕಲ್ಲೆಸೆದು ಅವರನ್ನು ಓಡಿಸಿ ಬೆಳೆಗಳನ್ನು ನಾಶ ಮಾಡಿದ್ದಾರೆ. ಅದಕ್ಕೆ ಪರಿಹಾರ ಕೊಡಿ ಎಂದು ಕೇಳಿದರೆ ಆ ಪರಿಹಾರ ಒಂದು ಕಥೆ ಇರಲಿ, ಅವರನ್ನು ಸಹಿತ ಸುಮ್ಮನೆ ಬಿಡುತ್ತಿಲ್ಲ ಎನ್ನುವಂಥ ವಿಚಾರವನ್ನು ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇನ್ನು ಈ ವಿಷಯವನ್ನು ಮಾನ್ಯ ಸಚಿವರ ಜೊತೆ ಚರ್ಚೆ ಮಾಡಿ ಅವರಿಗೆ ವಿವರವಾದ ವರದಿಯನ್ನು ಒಪ್ಪಿಸಿ ಇದು ಹೀಗೆ ಆಗಬಾರದಾಗಿತ್ತು ಅವರು ದಾಖಲೆ ಹೊಂದಿದ್ದಾರೆ 1978ರ ಪೂರ್ವದ ದಾಖಲೆ ಅವರ ಹತ್ತಿರ ಇದೆ, ಅವರ ತಂದೆ ಕಾಲದಿಂದ ಅವರು ತಮ್ಮ ಜಮೀನನ್ನು ಮಾಡಿಕೊಂಡು ಬಂದಿದ್ದಾರೆ ಎನ್ನತಕ್ಕಂಥ ವಿಚಾರದಲ್ಲಿ ಅಲ್ಲಿರತಕ್ಕಂಥ ಮಾವಿನ ಗಿಡಗಳು, ಬಾಳೆಗಿಡಗಳು ಅವೆಲ್ಲಾ ಸಾಕ್ಷಿಯಾಗಿವೆ. ಇಷ್ಟೆಲ್ಲಾ ಆದಮೇಲೆ ನಾವು ಅವರಿಗೆ ಬೇರೆ ಕಡೆ ಜಮೀನು ಕೊಡುತ್ತೇವೆ ಎಂದು ಅಧಿಕಾರಿಗಳು ಉತ್ತರದಲ್ಲಿ ಹೇಳುತ್ತಾರೆ ಬೇರೆ ಕಡೆ ಜಮೀನು ಕೊಡುತ್ತಾರೆ ಎಂದರೆ ಅವರಿಗೆ ಅರ್ಹತೆ ಇದ್ದಹಾಗೆ ಎಂದು